ಬ್ಯಾಂಕ್ ಆಫೀಸರ್‌ನ ಹೆಂಡತಿ ಬಗ್ಗೆ ಎಲ್ಲ ವಿವರ ಶೇಖರಿಸಿದಾಗ ಒಂದು ವಿಷಯ ಬಯಲಾಗುತ್ತದೆ. ಅದನ್ನು ಕೇಳಿದರೆ ಶಾಕ್ ಆಗಬಹುದು ಎನ್ನುತ್ತಾನೆ ಚೀಫ್. ಅವರು ಏನು ಹೇಳುತ್ತಾರೋ ಎಂದು ಕುತೂಹಲದಿಂದ ಎಲ್ಲ ಆಫೀಸರ್‌ಗಳು ಅವರ ಕಡೆ ನೋಡುತ್ತಾರೆ. 'ಬ್ಯಾಂಕ್ ಆಫೀಸರ್ ಹೆಂಡತಿಯ ಫೋನ್‌ನಿಂದ ಕಾರ್ಗಿಲ್ ಪಕ್ಕದಲ್ಲಿರುವ ಡ್ರಾಸ್ ಎಂಬ ಊರಿಗೆ ಬಹಳ ಫೋನ್ ಕಾಲ್ಸ್ ಹೋಗಿವೆ' ಎಂಬ ವಿಷಯ ತಿಳಿದಾಗ ಎಲ್ಲರೂ ಕಕ್ಕಾಬಿಕ್ಕಿಯಾಗುತ್ತಾರೆ. ಈ ಎಲ್ಲ ವಿವರಗಳನ್ನು ಸಂಗ್ರಹಿಸಲು ಕೃಷ್ಣ–ಕಲ್ಯಾಣಿ ಕಾಶ್ಮೀರಕ್ಕೆ ಹೋಗಿರಬಹುದು ಎಂದು ಊಹೆ ಮಾಡುತ್ತಾನೆ ಕುಕ್ಕುಟೇಶ್ವರಸ್ವಾಮಿ. ಇದು ಶಾಕಿಂಗ್ ನ್ಯೂಸ್ ಎನ್ನುವುದಕ್ಕಿಂತಲೂ ಕೃಷ್ಣ–ಕಲ್ಯಾಣಿ ಮದುವೆಯಾಗುತ್ತಾರೆ ಎಂಬುದು ಮತ್ತೂ ಶಾಕಿಂಗ್ ನ್ಯೂಸ್ ಆಗುತ್ತದೆ, ಇದನ್ನು ಕೇಳಿ ಎಲ್ಲ ಆಫೀಸರ್‌ಗಳಿಗೂ ಶಾಕ್ ಆಗುತ್ತದೆ, ಈ ವಿಷಯ ಯಾರಿಗೂ ಹೇಳಲೇ ಇಲ್ಲ ಎಂದು. ಈ ವಿಷಯವನ್ನು ಸ್ವತಃ ಕೃಷ್ಣನೇ ಫೋನ್ ಮಾಡಿ ತಿಳಿಸಿರುತ್ತಾನೆ. ಆದರೆ ಇದು ಮದುವೆಯೋ ಸಹಜೀವನವೋ ಎಂಬುದನ್ನು ತಿಳಿಯುವ ಕುತೂಹಲ ಎಲ್ಲರಲ್ಲಿರುತ್ತದೆ. ಕೃಷ್ಣ–ಕಲ್ಯಾಣಿ ಸ್ವಿಮಿಂಗ್‌ಪೂಲ್‌ನತ್ತ ನಡೆಯುತ್ತಾರೆ. ಅಲ್ಲಿ ಬಟರ್‌ಫ್ಲೈ ಎಫೆಕ್ಟ್ ಬಗ್ಗೆ ಚರ್ಚೆ ನಡೆಸುತ್ತಾರೆ.



ಇತ್ತ ಕಡೆ ಪ್ರೇಮಜಿತ್ ಯಾವುದೋ ಕೆಲಸದ ನಿಮಿತ್ತ ಕಾಶ್ಮೀರಕ್ಕೆ ಬಂದಿರುತ್ತಾನೆ. ಕಲ್ಯಾಣಿ ತನ್ನ ಮನೆಯಲ್ಲಿ ಇರುತ್ತಾಳೆ. ಯಾವುದೋ ಹಾಡನ್ನು ಸಣ್ಣದಾಗಿ ಹಾಡುತ್ತ ಕಿಚನ್‌ನಲ್ಲಿ ಅಡುಗೆ ಮಾಡುತ್ತಿರುತ್ತಾಳೆ. ಸಣ್ಣದಾಗಿ ಹಾಡಿಕೊಳ್ಳುತ್ತ ಕೆಲಸ ಮಾಡುವುದು ಅವಳ ರಿಲ್ಯಾಕ್ಸಿಂಗ್ ಟೆಕ್ನಿಕ್‌ಗಳಲ್ಲಿ ಒಂದು. ಶ್ರೀರಾಗವನ್ನು ಸ್ವಲ್ಪ ಬದಲಾವಣೆ ಮಾಡಿ ಮಧ್ಯಮಾವತಿ ರಾಗದಲ್ಲಿ ಹಾಡುತ್ತಿರುತ್ತಾಳೆ. ಸಣ್ಣ ಮಕ್ಕಳ ಕಂಪ್ಯೂಟರ್ ಗೇಮ್ಸ್‌ನಲ್ಲಿ ಎಷ್ಟು ಉತ್ತೇಜನ ಪಡೆಯುತ್ತಾರೋ, ಒಂದು ಸಾರಿ ಅಭ್ಯಾಸವಾದರೆ ರಾಗಗಳನ್ನು ಬದಲಾವಣೆ ಮಾಡಿ ಹಾಡುವುದರಲ್ಲೂ ಅಷ್ಟೇ 'ಕಿಕ್' ಸಿಗುತ್ತದೆ ಎಂಬುದು ಕಲ್ಯಾಣಿ ಅಭಿಪ್ರಾಯ.

ಗಂಡಸರಲ್ಲಿ ಎರಿಟೋಮೇನಿಯಾ ಇರುವ ಕೆಲವರು ಸ್ಟಾಕರ್‌ಗಳಾಗಿ ಬದಲಾಗುತ್ತಾರೆ. ಎದುರಿಗಿರುವ ಹುಡುಗಿ ತನ್ನನ್ನು ಪ್ರೇಮಿಸುತ್ತಾಳೆ, ಆದರೆ ಯಾವುದೇ ಕಾರಣದಿಂದ ಇಲ್ಲವೆನ್ನುತ್ತಿದ್ದಾಳೆ ಎಂದು ನಂಬುತ್ತಾರೆ. ಮೊದಲು ಬೇಡಿಕೊಳ್ಳುತ್ತಾಳೆ. ನಂತರ ಬೆದರಿಸುತ್ತಾರೆ, ಈಗಲೂ ಅವಳು ಒಪ್ಪದಿದ್ದರೆ ಆ್ಯಸಿಡ್ ಎರಚುತ್ತಾರೆ, ಇಲ್ಲವೇ ಸಾಯಿಸಿಬಿಡುತ್ತಾರೆ.

ಅಂತಹ ಒಬ್ಬ ಮಾನಸಿಕ ರೋಗಿ ಪ್ರೇಮ್.

ಆ ರಾತ್ರಿ ಅವನು ಗಂಡ ಹೆಂಡತಿ ನಡುವಿನ ಸಂಭಾಷಣೆ ಕೇಳಿಸಿಕೊಂಡನು. ಅವನ ರೂಂಗೂ, ಅವರ ಬೆಡ್‌ರೂಂಗೂ ನಡುವೆ ಕಟಕಿ ಇತ್ತು. ರೂಂಗೆ ಬಂದ ದಿನವೇ ಕಿಟಕಿಗೆ ಒಂದು ಸಣ್ಣ ರಂಧ್ರ ಕೊರೆದಿದ್ದನು.

'ವೋಯರಿಸಂ' ಅಂತ, ಇದೊಂದು ಮನೋವೈಕಲ್ಯ.

ಒಳಗಿನ ಮಾತುಗಳು ಸ್ಪಷ್ಟವಾಗಿ ಕೇಳಿಸುತ್ತಿದ್ದವು. 'ನಮ್ಮ ತಂದೆ ವಿಷಯ ಅವನಿಗೇಕೆ ಹೇಳಿದೆ?' ಎಂದು ಕಲ್ಯಾಣಿ ಕೇಳಿದಳು. 'ಯಾಕೆ? ತಪ್ಪೇನಿದೆ?' ಎಂದನು ಕೃಷ್ಣ. ಅವನ ಜೊತೆ ಸೇರಿ ಕುಡಿದಿದ್ದೇ ತಪ್ಪು. ಇನ್ನು ಈ ವಿಷಯಗಳನ್ನೆಲ್ಲ ಅವನಿಗೆ ಹೇಳ್ತೀಯ. ಅವನೆಂದರೆ ನನಗಿಷ್ಟವಿಲ್ಲ ಅಂತ ಆವತ್ತೇ ಹೇಳಿದೆನಲ್ಲ?'

'ಅವನೇ ಕರೆದ'

'ಕರೆದರೆ ಹೋಗಿ ಬಿಡುವುದು? ಅದಿರಲಿ, ಕುಡಿತದ ಅಭ್ಯಾಸ ಇದೆ ಅಂತ ನನಗೆ ಮದುವೆಗೆ ಮೊದಲೇ ಏಕೆ ಹೇಳಲಿಲ್ಲ?'

'ಹೇಳಿದ್ದರೆ ಮದುವೆ ಆಗುತ್ತಿದ್ದೆಯೇನು?' ವ್ಯಂಗ್ಯವಾಗಿ ಕೇಳಿದನು.

'ಅದು ಆ ಮೇಲಿನ ವಿಷಯ. ಮದುವೆ ಆಗಬೇಕಾ, ಬೇಡವಾ ಅಂಶ ನಿರ್ಧಾರ ತೆಗೆದುಕೊಳ್ತಿದ್ದೆ. ಸಣ್ಣ ಕೆಲಸ ಮಾಡುವುದಕ್ಕೆ ಮೊದಲೂ ದೇವರಿಗೆ ನಮಸ್ಕಾರ ಮಾಡುವ ನೀನು, ಡ್ರಿಂಕ್ಸ್ ಬಗ್ಗೆ ಹೇಳಿದ ತಕ್ಷಣ ಆಸೆಯಿಂದ ಹೋದ ನೀನು ಒಳ್ಳೆಯ ಮನಸ್ಥಿತಿಯವನೆಂದು ಹೇಗೆ ತಿಳಿಯಲಿ? ಬಹಳ ನಯವಾಗಿ ಮಾತನಾಡುವ ನಿನ್ನಲ್ಲಿ ಇಷ್ಟು ಕೋಪ ಇದೆ ಅಂತ ಹೇಗೆ ಭಾವಿಸಲಿ? ಮದುವೆಗೆ ಮೊದಲು ಒಂದು ರೀತಿ ನಡೆದುಕೊಂಡು, ಮದುವೆಯ ನಂತರ ಬೇರೊಂದು ರೀತಿ ಬದಲಾಗುವ ಬಹಳ ಮಂದಿ ಗಂಡಸರಲ್ಲಿ ನೀನು ಕೂಡ ಒಬ್ಬನಾಗಿರುವುದು ನನ್ನ ದುರದೃಷ್ಟ'

'ಅಷ್ಟು ಕೆಲಸ ನಾನೇನು ಮಾಡಿದೆ?'

'ಹೊಡೆದಿದ್ದು.... ಸಣ್ಣವಳಾಗಿದ್ದಾಗಿನಿಂದಲೂ ನಮ್ಮಪ್ಪ ನನ್ನ ಮೇಲೆ ಕೈ ಎತ್ತಿಲ್ಲ. ಅಂತಹುದು ನೀನು..' ಧ್ವನಿ ಗದ್ಗದವಾದ್ದರಿಂದ ಅವಳು ಮಾತು ನಿಲ್ಲಿಸಿದಳು.

ಮದುವೆಯಾದ ಹೊಸದರಲ್ಲೇ ಗಂಡ ಹೆಂಡತಿ ನಡುವೆ ಜಗಳ ಪ್ರಾರಂಭ ಆಗಿದೆ ಎಂದು ಪ್ರೇಮ್‌ಗೆ ಅರ್ಥವಾಯಿತು, ಸಂತೋಷವಾಯಿತು. ತನ್ನ ಕೆಲಸ ಸುಲಭವಾಗುತ್ತಿದೆ ಎಂದೂ ಅನಿಸಿತು.

ಅವನ ಕೆಲಸ ಮತ್ತಷ್ಟು ಸುಲಭವಾಗುವ ಸಂದರ್ಭ ಮರುದಿನ ಬಂದಿತು.

***

ಅರ್ಜೆಂಟಾಗಿ ಬಾ ಎಂದು ಕರೆ ಬಂದಿದ್ದರಿಂದ ಕೃಷ್ಣ ಹೋಗಿ ಚೀಫ್ ಅವರನ್ನು ಭೇಟಿ ಮಾಡಿದನು.

'ಏನು ಸರ್, ಅರ್ಜೆಂಟಾಗಿ ಬರಲಿಕ್ಕೆ ಹೇಳಿದಿರಿ?'